ಮಾತುಕತೆ

# ಸ್ವಾತಂತ್ರ್ಯವಿಲ್ಲದ ಕಲೆಯ ನೈಪುಣ್ಯ ಅರ್ಥವಿಲ್ಲದ್ದು

## ದೇಶದ ಪ್ರಸಿದ್ಧ ಚಿತ್ರಕಾರ ಅಶೋಕ್ ಭೌಮಿಕ್ ಸಂದರ್ಶನ



ವಿಕ್ರಮ ವಿಸಾಜಿ

ಅಶೋಕ್ ಭೌಮಿಕ್ (1953) ದೇಶದ ಪ್ರಸಿದ್ಧ ಚಿತ್ರಕಾರರು. ಉತ್ತರ ಪ್ರದೇಶದವರು. ಕೆಲ ಕಾಲ ಕೊಲ್ಕತ್ತಾದ ರಂಗಭೂಮಿ, ಚಳವಳಿಗಳಲ್ಲಿ ಸಕ್ರಿಯರಾಗಿದ್ದರು. ಕಳೆದ ಕೆಲ ವರ್ಷಗಳಿಂದ ದೆಹಲಿಯ ನಿವಾಸಿ. ದೇಶ, ವಿದೇಶಗಳಲ್ಲಿ ತಮ್ಮ ಚಿತ್ರಕಲಾ ಪ್ರದರ್ಶನಗಳಿಂದ ಖ್ಯಾತಿ ಗಳಿಸಿದ್ದಾರೆ. ಕ್ರಾಸ್‌ಹ್ಯಾಚಿಂಗ್ ಚಿತ್ರಕಲೆಯಲ್ಲಿ ಪರಿಣಿತಿ ಪಡೆದ ದೇಶದ ಕೆಲವೇ ಕಲಾವಿದರಲ್ಲಿ ಇವರದು ಮುಖ್ಯವಾದ ಹೆಸರು. ಬಹುಮುಖ ಪ್ರತಿಭೆಯ ಅಶೋಕ್ ಲೇಖಕ, ಕಲಾಚಿಂತಕ, ರಂಗಕರ್ಮಿ, ಶಿಲ್ಪಕಲಾವಿದ ಮತ್ತು ಚಿತ್ರಕಲಾವಿದರು. ಎಪ್ಪತ್ತು ಮತ್ತು ಎಂಬತ್ತರ ದಶಕಗಳಲ್ಲಿ ರಾಜಕೀಯ ಕವಿತೆಗಳನ್ನು ಬರೆಯುತ್ತ ಅವುಗಳಿಗೆ ಪೋಸ್ಟರ್‌ಗಳನ್ನು ರೂಪಿಸುತ್ತ ಜನಪ್ರಿಯತೆ ಪಡೆದಿದ್ದರು. ಪೋಸ್ಟರ್‌ಗಳನ್ನು ಚಳವಳಿಯ ಭಾಗವಾಗಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ನಿರ್ಲಕ್ಷ್ಯಕ್ಕೊಳಗಾಗಿದ್ದ ಕಲಾವಿದರಾದ ಚಿತ್ತಪ್ರಸಾದ್, ಜೈನುಲ್ ಆಬೇದಿನ್, ಕಮರುಲ್ ಹಸನ್, ಸೋಮನಾಥ ಹೋರ್ ಮತ್ತು ಸಾದೆಕೈನ್ ಸರೀಖೆ ಅವರ ಮಹತ್ವವನ್ನು ಕಲಾಜಗತ್ತಿಗೆ ತಿಳಿಸಿಕೊಟ್ಟರು. ತಮ್ಮ ವಿಭಿನ್ನ ಕಲಾಚಿಂತನೆಗಾಗಿ ಮಹತ್ವದ ಸ್ಥಾನ ಪಡೆದರು. ಮಕ್ಕಳಿಗಾಗಿ ಹೊರಡುವ ಪತ್ರಿಕೆ 'ಸೈಕಲ್', 'ಚಕ್‌ಮಕ್' ಮತ್ತು 'ಪ್ಲುಟೊ'ದಲ್ಲಿ ನಿಯಮಿತವಾಗಿ ಲೇಖನಗಳನ್ನು ಬರೆದರು. ಮಕ್ಕಳಲ್ಲಿ ಕಲಾಭಿರುಚಿ ಹುಟ್ಟಿಸುವ ಪ್ರಯತ್ನಗಳಿಗೆ ತಮ್ಮನ್ನು ತೆರೆದುಕೊಂಡರು. ಹಿಂದಿಯ ಪ್ರಸಿದ್ಧ ಪತ್ರಿಕೆ 'ಪ್ರಭಾತ್ ಖಬರ್'ನಲ್ಲಿ ಚಿತ್ರಕಲಾ ಜಗತ್ತಿನ ಆಗುಹೋಗುಗಳ ಕುರಿತು ಅಂಕಣ ಬರೆಯುತ್ತಾರೆ. 'ಆಯಿಸ್ ಪಾಯಿಸ್', 'ಜೀರೊ ಲೈನ್ ಪರ್ ಗುಲ್ಜಾರ್', 'ಜೀವನ್ ಪುರಾಹಟ್ ಜಂಕ್ಷನ್' (ಕಥೆಗಳ ಸಂಗ್ರಹ), 'ಬಾದಲ್ ಸರ್ಕಾರ್ : ವ್ಯಕ್ತಿ ಔರ್ ರಂಗಮಂಚ್', 'ಅಕಾಲ್ ಕಿ ಕಲಾ ಔರ್ ಜೈನುಲ್ ಆಬೇದಿನ್' (ಜೀವನ ಚರಿತ್ರೆ), 'ಮೊನಾಲಿಸಾ ಹಸ್ ರಹಿ ಥಿ', 'ಶಿಪ್ರಾ ಏಕ್ ನದೀ ಕಾ ನಾಮ್ ಹೈ' (ಕಾದಂಬರಿ), 'ಸಮಕಾಲೀನ್ ಭಾರತೀಯ ಕಲಾ ಹುಸೇನ್ ಕೆ ಬಹಾನೆ', 'ಭಾರತೀಯ ಚಿತ್ರಕಲಾ ಕಾ ಸಚ್', 'ಚಿತ್ರೋ ಕಿ ದುನಿಯಾ', 'ರವೀಂದ್ರನಾಥ ಟ್ಯಾಗೋರ್ ಕಿ ಚಿತ್ರಕಲಾ', 'ಚಿತ್ತ್‌ಪ್ರಸಾದ್ ಔರ್ ಉನ್ ಕಿ ಚಿತ್ರಕಲಾ', 'ಮಹಾಮಾರಿ ಔರ್ ಚಿತ್ರಕಲಾ', 'ಚಿತ್ರಕಲಾ, ಚಿತ್ರ ಔರ್ ಚಿತ್ರಕಾರ್' (ಕಲಾಚಿಂತನೆ) ಅವರ ಪ್ರಸಿದ್ಧ ಕೃತಿಗಳು. ಪ್ರಸ್ತುತ ಅಮೃತಾ ಶೇರ್‌ಗಿಲ್ ಅವರ ಚಿತ್ರಕಲಾಕೃತಿಗಳ ಬಗ್ಗೆ ಪುಸ್ತಕ ರಚನೆಯಲ್ಲಿ ನಿರತರಾಗಿದ್ದಾರೆ. ನೋಯ್ಡಾದ ಅವರ ಅಪಾರ್ಟ್‌ಮೆಂಟ್‌ನಲ್ಲಿ 'ಮಯೂರ'ಕ್ಕಾಗಿ ನಡೆಸಿದ ಸಂದರ್ಶನವಿದು. ದೆಹಲಿಯ ಕೊರೆವ ಚಳಿಯಲ್ಲಿ ಅವರ ವಿದ್ವತ್ ಪ್ರತಿಭೆ ಆವರಿಸಿಕೊಂಡಿತ್ತು. ದೆಹಲಿಯ ಕೆಟ್ಟ ಗಾಳಿಯಲ್ಲಿ ಅವರ ಮಾತು ಹೊಸ ಉಲ್ಲಾಸ ಮೂಡಿಸಿತ್ತು.